# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಆಯುಕ್ತರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು 560002

ಸಂಖ್ಯೆ: ಆ/ಪಿಎಸ್‌ಆರ್/ 9305 (9) /2015-16 ದಿನಾಂಕ: 16-12-2015

## ಸುತ್ತೋಲೆ-3

**ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಾಕಿ ಯಂತ್ರವನ್ನು ಸಮರ್ಪಕವಾಗಿ ಉಪಯೋಗಿಸುವ ಕುರಿತು**

***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎಲ್ಲಾ ವಲಯಗಳ ವಿವಿಧ ಅಧಿಕಾರಿ ಮತ್ತು ಸಿಬ್ಬಂಧಿ ವರ್ಗದವರಿಗೆ ಪಾಲಿಕೆಯ ಕೆಲಸ ಕಾರ್ಯಗಳ ತ್ವರಿತ ಗತಿಯಲ್ಲಿ ನಿವರ್ಹಿಸಲು ವಾಕಿ ಯಂತ್ರಗಳನ್ನು ನೀಡಲಾಗಿರುತ್ತದೆ. ಹಾಗೂ ಹಿರಿಯ ಅಧಿಕಾರಿಗಳ ವಾಹನಗಳಿಗೆ ವೈರ್‌ಲೆಸ್ ಯಂತ್ರಗಳನ್ನು ಅಳವಡಿಸಲಾಗಿರುತ್ತದೆ. ಆದರೆ ಸದರಿ ಯಂತ್ರಗಳನ್ನು ಅಧಿಕಾರಿಗಳು ಉಪಯೋಗಿಸದೇ ಇರುವುದು ಕಂಡು ಬಂದಿದ್ದು ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಎಲ್ಲಾ ಅಧಿಕಾರಿಗಳು (ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು, ಸಹಾಯಕ/ಕಿರಿಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತರರು, ಮುಖ್ಯ ಅಭಿಯಂತರರು, ಆರೋಗ್ಯ ವೈದ್ಯಾಧಿಕಾರಿಗಳು, ಉಪ ಆರೋಗ್ಯಾಧಿಕಾರಿಗಳು, ಆರೋಗ್ಯಾಧಿಕಾರಿಗಳು ಮತ್ತು ಜಂಟಿ ಆಯುಕ್ತರುಗಳು) ಕಡ್ಡಾಯವಾಗಿ ವಾಕಿ ಯಂತ್ರಗಳು/ವೈರ್‌ಲೆಸ್ ಯಂತ್ರಗಳನ್ನು ಉಪಯೋಗಿಸತಕ್ಕದು. ವಾಕಿ/ವೈರ್‌ಲೆಸ್ ಯಂತ್ರಗಳನ್ನು ಪಡೆಯದಂತಹ ಅಧಿಕಾರಿಗಳು ತಮ್ಮ ತಮ್ಮ ವಲಯದ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರಿಂದ ಯಂತ್ರಗಳನ್ನು ಪಡೆದು ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ಉಪಯೋಗಿಸುವಂತೆ ನಿರ್ದೇಶಿಸಿದೆ. ಹಾಗೂ ಈಗಾಗಲೇ ನೀಡಿರುವಂತಹ ವಾಕಿ/ವೈರ್‌ಲೆಸ್ ಯಂತ್ರಗಳು ಕಾರ್ಯ ನಿರ್ವಹಿಸದಿದ್ದಲ್ಲಿ ಮೆ॥ ಮೌರ್ಯ ಇನ್‌ಫೋಟೆಕ್ ಪ್ರೈಲಿ, ಇಂದಿರಾ ನಗರ, ದೂರವಾಣಿ ಸಂಖ್ಯೆ: 9900032304, 9845999302 ರವರಲ್ಲಿ ಉಚಿತವಾಗಿ ರಿಪೇರಿ ಮಾಡಿಸಿಕೊಂಡು ಉಪಯೋಗಿಸತಕ್ಕದ್ದು. ಇನ್ನು ಮುಂದೆ ಯಾವುದೇ ಅಧಿಕಾರಿಗಳು ವಾಕಿ ಯಂತ್ರಗಳನ್ನು ಉಪಯೋಗಿಸದೇ ಇರುವುದು ಕಂಡುಬಂದಲ್ಲಿ ಅವರುಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಲಾಗಿದೆ.

(ಸಹಿ) 16.12.15
ವಿಶೇಷ ಆಯುಕ್ತರು (ಆ & ಘ.ತ್ಯಾ.ನಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಸಹಿ)
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರವರಿಗೆ,**

ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

**ಪ್ರತಿಯನ್ನು,**

- ಮಾನ್ಯ ಮಹಾಪೌರರ ಗಮನಕ್ಕೆ ತರಲು ಮಹಾಪೌರರ ಆಪ್ತ ಕಾರ್ಯಲಯಕ್ಕೆ ಕಳುಹಿಸಲಾಗಿದೆ.
- ಉಪಮಹಾಪೌರರ ಗಮನಕ್ಕೆ ತರಲು ಉಪಮಹಾಪೌರರ ಆಪ್ತ ಕಾರ್ಯಲಯಕ್ಕೆ ಕಳುಹಿಸಲಾಗಿದೆ.
- ಕಛೇರಿ ಪ್ರತಿ.